(12)

# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 550 ಗ್ರಾಪಂಕಾ 2016, ದಿನಾಂಕ 18.10.2016
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್/ಡಿಇ-549/2016/ಎಆರ್‌ಇ-8, ದಿನಾಂಕ 28.03.2018
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 17.04.2018
4) ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 10.05.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

> "ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಹಾಲಿ ವಜ್ರಮಟ್ಟಿ ಗ್ರಾಮ ಪಂಚಾಯತಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಆಪಾದಿತ ಸರ್ಕಾರಿ ನೌಕರರಾದ ನೀವು ಸತ್ತಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಶ್ರೀ ಬಾಹುಸಾಹೇಬ್ ಕೃಷ್ಣಾಜಿ ಕುಲಕರ್ಣಿ ಅವರು ಆಸ್ತಿವಂತರೆಂದು ಸಂಬಂಧಪಟ್ಟ ದಾಖಲೆಗಳಿಂದ ಸ್ಪಷ್ಟವಾಗಿದ್ದರೂ, ಅವರನ್ನು ಬಡವರೆಂದು ತೀರ್ಮಾನಿಸಿ, ಗ್ರಾಮಠಾಣಾ ಜಾಗವನ್ನು ಸದರಿಯವರಿಗೆ ನೀಡಿರುತ್ತೀರಿ ಮತ್ತು ಜಾಗವನ್ನು ಹಸ್ತಾಂತರಿಸುವಾಗ ಕಾನೂನು ಕ್ರಮವನ್ನು ಪಾಲಿಸದೇ ಕರಾಕರಣೆಯ ನೆಪವನ್ನು ನೀಡಿ ಆಸ್ತಿಗಳಿಗೆ ವಿ.ಪಿ.ಸಿ. ನಂಬರ್‌ಗಳನ್ನು ನೀಡಿ ಕರ್ತವ್ಯಲೋಪವೆಸಗಿರುತ್ತೀರಿ. ಆದ ಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ(ಸದವರ್ತನೆ) ನಿಯಮಾವಳಿ 1966 ರ 3(ii) & (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ರವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ರವರ ದಿನಾಂಕ: 28.03.2018 ರ ವರದಿಯಲ್ಲಿ ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಹಾಲಿ ವಜ್ರಮಟ್ಟಿ ಗ್ರಾಮ ಪಂಚಾಯತಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ 'ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಪಡೆಯುವ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ಮುಂದೂಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1) ನಾನು ಸತ್ತಿ ಗ್ರಾಮ ಪಂಚಾಯಿತಿಗೆ ದಿನಾಂಕ: 27.05.2010 ರಂದು ಗ್ರೇಡ್–1 ಕಾರ್ಯದರ್ಶಿ ಅಂತಾ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಥಣಿ ಇವರ ಕಾರ್ಯಾಲಯಕ್ಕೆ ಹಾಜರಾಗಿ ದಿನಾಂಕ: 28.05.2010 ರಂದು ಸದರಿ ಗ್ರಾಮ ಪಂಚಾಯತಕ್ಕೆ ಹಾಜರಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ. ನಂತರ ಸದರಿ ಗ್ರಾಮ ಪಂಚಾಯಿತಿಯಲ್ಲಿ ಶ್ರೀ. ನಾಯಕ ಪ್ರಭಾರ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಸತ್ತಿ (ನಾಗನೂರ ಪಂಚಾಯತ ಅಭಿವೃದ್ಧಿ ಅಧಿಕಾರಿ ತಾಲ್ಲೂಕು ಅಥಣಿ) ಇವರಿಂದ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಅಥಣಿ ಇವರ ಆದೇಶದನ್ವಯ ನಾನು ದಿನಾಂಕ: 22.11.2010ರಂದು ಸದರಿ ಗ್ರಾಮ ಪಂಚಾಯತದ ಪ್ರಭಾರ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಪ್ರಾರಂಬಿಸಿದ್ದೆನು.
2) ಶ್ರೀ. ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರು ದಿನಾಂಕ: 01.09.2011 ರ ಪ್ರಕಾರ ತಮ್ಮ ಅರ್ಜಿಯಲ್ಲಿ ಅಸ್ಪಷ್ಟವಾಗಿ ಸತ್ತಿ ಗ್ರಾಮದಲ್ಲಿರುವ ಗಾಂವಾಠಾಣ ಜಾಗೆಯನ್ನು ತಮ್ಮ ಹೆಸರಿಗೆ ನಮೂನೆ–9ರಲ್ಲಿ ನಮೂದಿಸಿ ಉತಾರೆ ಕೊಡಲು ತಮ್ಮ ಅರ್ಜಿಯನ್ನು ಸಲ್ಲಿಸಿದರು ಗ್ರಾಮ ಪಂಚಾಯತ ಸಾಮಾನ್ಯ ಸಭೆಯು 09.09.2011 ರಂದು ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಮಾನ್ಯ ಅಧ್ಯಕ್ಷರು ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿತು. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸದರಿ ಚರ್ಚಿಸಿತಕ್ಕ ವಿಷಯಗಳಲ್ಲಿ ಸದರಿ ಅರ್ಜಿದಾರರ ಅರ್ಜಿಯು ಬಂದಿರುವುದಿಲ್ಲ ಆ ಅರ್ಜಿಯ ಬಗ್ಗೆ ಚರ್ಚಿಸುವ ಪ್ರಮೇಯು ಬರುವುದಿಲ್ಲ ಮೇಲಿನಂಎ ಅರ್ಜಿದಾರರು ಮಾನ್ಯ ಅಧ್ಯಕ್ಷರು ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಹಾಗೂ ಗುಮಾಸ್ತ ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಇವರಿಬ್ಬರೂ ಕೂಡಿಕೊಂಡು ನಂತರ ಅರ್ಜಿಯನ್ನು ಅರ್ಜಿದಾರರಿಂದ ಪಡೆದುಕೊಂಡು ದಿನಾಂಕ: 09.09.2011 ರ ನಡುವಳಿಕೆಯಲ್ಲಿ ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಇವರು ಆತನಿಂದ ಪಡೆದ ಅರ್ಜಿಯನ್ನು ನಡುವಳಿಕೆಗಳನ್ನು ಆತನು ಬರೆಯುವಾಗ ಕೊನೆಯಲ್ಲಿ ಸದರಿ ಅರ್ಜಿದಾರರ ನಡುವಳಿಕೆಯನ್ನು ಸಹಿತ ಬರೆದಿರುತ್ತಾರೆ. ನನ್ನ ಗಮನಕ್ಕೆ ಬರದೆ ಕೊನೆಯಲ್ಲಿ ಉಳಿದ ನೆದರ ಚುಕ್ಕಿನಿಂದ ಸಹಿ ಮಾಡದೇ ಇರುವುದನ್ನು ಗಮನಿಸಿ ಸದರಿ ಠರಾವಿನಲ್ಲಿ ಸ್ಥಳಾವಕಾಶವನ್ನು ಉಪಯೋಗಿಸಿಕೊಂಡು ಬರೆದು ಕೊಂಡಿರುತ್ತಾನೆ. ಹಾಗೂ ನನ್ನ ನೆದರ ಚುಕ್ಕಿನಿಂದ ಸಹಿ ಆಗದೇ ಉಳಿದಿರುವುದನ್ನು ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಹಾಗೂ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರು ನನ್ನ ಸಹಿ ಪೋರ್ಜರಿಯಾಗಿ ಮಾಡಿದ್ದಾರೆ. (ಪೋರ್ಜರಿ ಸಹಿಯನ್ನು ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಇವರು ಮಾಡಿರುತ್ತಾರೆ. ಠರಾವಿನ ಮೂಲ ಪ್ರತಿಯನ್ನು ಲಗತ್ತಿಸದೆ ಪುಟ ಸಂಖ್ಯೆ–2) ದಿನಾಂಕ: 05.11.2011ರ ನಡವಳಿಕೆ ಪುಸ್ತಕದಲ್ಲಿ ನಾನು ಸ್ವತಃ ಸಹಿ ಮಾಡಿದ್ದು ಠರಾವಿನ ಝರಾಕ್ಸ ಪ್ರತಿಯನ್ನು ಹಾಗೂ ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ–2018 ಗುರುತಿನ ಚೀಟಿಯಲ್ಲಿ ನನ್ನ ಸಹಿ ಲಗತ್ತಿಸಿದೆ ಈ ಪ್ರಕಾರವಾಗಿ ಮಾನ್ಯ ಅಧ್ಯಕ್ಷರು ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಹಾಗೂ ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಇವರು ಇಬ್ಬರು ಜೊತೆಗೂಡಿ ನಮೂನೆ–9ರ ಗ್ರಾಮ ಪಂಚಾಯತ ಆಸ್ತಿ ರಜಿಸ್ಟರನಲ್ಲಿ ದಾಖಲು ಮಾಡಿ ನನ್ನ ನಂತರ ಬಂದ ಪಂಚಾಯತ ಅಭಿವೃದ್ಧಿ ಅಧಿಕಾರಿ ಶ್ರೀ.ಆರ್.ಆಯ್ ಪೋಲಿಸನವರ ಇವರು ಶ್ರೀ. ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರಿಗೆ ಉತಾರ ನೀಡಿರುತ್ತಾರೆ.
3) ಶ್ರೀ.ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರು ತಮಗೆ ಪ್ರಪಂಚದ ಅಡಚಣೆಯ ಸಲುವಾಗಿ ಗ್ರಾಮ ಪಂಚಾಯತ ಆಸ್ತಿ ರಜಿಸ್ಟರನಲ್ಲಿ ನಮೂದಾದ ಗ್ರಾಮ ಠಾಣಾ ಜಾಗೆಯನ್ನು ಶ್ರೀ. 1) ಮುದಕಪ್ಪ ಬಸಪ್ಪ ನಂದೀಶ್ವರ 2) ಶ್ರೀ ನಾಗಪ್ಪ ಬಸಪ್ಪ ನಂದೇಶ್ವರ ಇವರಿಗೆ ಸಾ॥ ಸತ್ತಿ ತಾಲ್ಲೂಕ ಅಥಣಿ ಜಿಲ್ಲಾ ಬೆಳಗಾವಿ ಇವರಿಗೆ ರೂ. 76000/– (ಎಪ್ಪತ್ತಾರು ಸಾವಿರ ರೂಗಳಿಗೆ) ಮಾರಾಟ ಮಾಡಿರುತ್ತಾರೆ ದಾಖಲೆಗಳು ಖರೀದಿ ಪತ್ರ ಹಾಗೂ ಗ್ರಾ.ಪಂ ನಡುವಳಿಕೆ ಮತ್ತು ಉತ್ತಾರೆ ಲಗತ್ತಿಸಿದೆ.

4) ಖಂಡಿಕೆ 2 ಮತ್ತು 3 ಇವುಗಳನ್ನು ಪರಿಶೀಲಿಸಿದಾಗ 1) ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಅಧ್ಯಕ್ಷರು 2) ಶ್ರೀ. ಆರ್ ಆಯ್ ಪೋಲಿಸನ್ನವರ ಗ್ರಾಮ ಪಂಚಾಯತ ಪ್ರಭಾರ ಅಭಿವೃದ್ಧಿ ಅಧಿಕಾರಿ ಗ್ರೇಡ್-2 ಕಾರ್ಯದರ್ಶಿ ಗ್ರಾಮ ಪಂಚಾಯತ ನಂದೇಶ್ವರ ತಾಲ್ಲೂಕು ಅಥಣಿ ಹಾಗೂ 3) ಶ್ರೀ ಈರಪ್ಪ ಗಂಗಪ್ಪ ತಮದಡ್ಡಿ ಗುಮಾಸ್ತ ಗ್ರಾಮ ಸತ್ತಿ ಈ ಮೂವರು ಕೂಡಿಕೊಂಡು ದಿನಾಂಕ: 09.09.2011 ರ ನಡುವಳಿಕೆ ಪುಸ್ತಕದಲ್ಲಿ ಖಾಲಿಯಿದ್ದ ಸ್ಥಳವನ್ನು ದುರುಪಯೋಗ ಪಡಿಸಿಕೊಂಡು ಶ್ರೀ. ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರ ಹೆಸರಿನಲ್ಲಿ ಯಾವುದೇ ತರಹದ ಚಕ್ ಬಂದಿ ಇಲ್ಲದೆ ಹಾಗೂ ಅಳತೆ ಇಲ್ಲದೆ ಅಸ್ಪಷ್ಟವಾಗಿ ನಡುವಳಿಕೆಯನ್ನು ಬರಿದು ನನ್ನ ನೆದರಚೂಕಿನಿಂದ ಉಳಿದ ಸಹಿಯನ್ನು ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಇವರು ಪೋರ್ಜರಿಯಾಗಿ ಸಹಿ ಗ್ರಾಮದ ಆಸ್ತಿ ರಜಿಸ್ಟರ ನಮೂನೆ-9ರಲ್ಲಿ ಕ್ರಮ ಸಂಖ್ಯೆ 2556, ಆಸ್ತಿ ನಂಬರ 1621 ರಲ್ಲಿ ದಾಖಲಿಸಿ ಉತಾರೆ ನೀಡಿದ್ದಾರೆ. ಸದರಿ ಗ್ರಾಮ ಠಾಣಾ ಜಾಗೆಗೆ ಗ್ರಾಮ ಪಂಚಾಯತಿಯಿಂದ ಯಾವುದೇ ನಿಯಮಗಳನ್ನು ಹಾಗೂ ಕಟ್ಟಳೆಗಳನ್ನು ವಿದಿಸಿರುವುದಿಲ್ಲಾ. ಹಿಗಾಗಿ ಶ್ರೀ. ಬಾಹುಸಾಬೇಬ ಕೃಷ್ಣಾಜಿ ಕುಲಕರ್ಣಿ ಈ ಮೇಲಿನಂತೆ ಸದರಿ ಗ್ರಾಮ ಠಾಣಾ ಜಾಗೆಯನ್ನು 76000/- ರೂಗಳಿಗೆ 1) ಶ್ರೀ. ಮುದಕಪ್ಪ ಬಸಪ್ಪ ನಂದೀಶ್ವರ 2) ಶ್ರೀ. ನಾಗಪ್ಪ ಬಸಪ್ಪ ನಂದೇಶ್ವರ ಇವರಿಗೆ ಮಾರಾಟ ಮಾಡಿರುತ್ತಾರೆ.

5) ಕಂಡಿಕೆ 4 ಮತ್ತು 5 ರಲ್ಲಿಯ ಅವಕಾಶಗಳನ್ನು ಬಳಸಿಕೊಂಡು ಶ್ರೀ. ಶಿವಾಜಿ ಬಾಳಪ್ಪ ಸನದಿ ಪತ್ರಕರ್ತ ಸಾ॥ ಅಥಣಿ ಜಿಲ್ಲಾ ಬೆಳಗಾಂವಿ ಇವರು ಸತ್ತಿ ಗ್ರಾಮ ಪಂಚಾಯತಿಯಿಂದ ಮಾಹಿತಿಗಳನ್ನು ಪಡೆದುಕೊಂಡು ಮಾನ್ಯ ಉಪಲೋಕಾಯುಕ್ತರು ಬೆಂಗಳೂರು ಇವರಿಗೆ ದಿನಾಂಕ: 03.06.2014 ರಲ್ಲಿ ದೂರು ದಾಖಲಿಸಿರುತ್ತಾರೆ .

6) ಏತನ್ಮಧ್ಯ ನಾನು ದಿನಾಂಕ: 12.05.2012 ರಲ್ಲಿ ಅನಾರೋಗ್ಯದಿಂದ ಬಾಗಲಕೋಟ ಕೆರೂಡಿ ಆಸ್ಪತ್ರೆಗೆ ದಾಖಲಾಗಿದ್ದೇನೆ ನಂತರ ವೈದ್ಯರ ಸಲಹೆ ಮೇರೆಗೆ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದೆನು ಸದರಿ ದಾಖಲೆಗಳನ್ನು ಲಗತ್ತಿಸಿದೆ.

7) ಮಾನ್ಯ ಸಾರ್ವಜನಿಕ ಅಬಿಯೋಜಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರ ಇವರ ನೋಟಿಸ್ ಸಂಖ್ಯೆ: Compt/UPLOK/BG,-1794/2014/PP ದಿನಾಂಕ: 25.10.2014ರ ನೋಟಿಸಿಗೆ ನಾನು ದಿನಾಂಕ: 07.11.2014 ರಂದು ನಾನು ನನ್ನ ಹೇಳಿಕೆಯನ್ನು ಸಲ್ಲಿಸಿದ್ದೇನೆ.

8) ಮಾನ್ಯ ಉಪನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆ ಬೆಂಗಳೂರ ಇವರ ಪತ್ರ ಸಂಖ್ಯೆ: ಗ್ರಾಅಪ/550/ಗ್ರಾಪಂಅ/2016 ದಿನಾಂಕ: 18.10.2016ರ ಪತ್ರವನ್ನು ಉಲ್ಲೇಖಿಸಿ ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾಂವಿ ಇವರ ಪತ್ರ ನಂ ಕ್ರಸಂ. ಜಿಪಂಬೆ ಪರಿಷತ್/ಸಿಆರ್/ಸರಕಾರ/2016-17 ದಿನಾಂಕ: 5.8.2016 ಇವರು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಅಥಣಿ ಇವರು ತಮ್ಮ ಪತ್ರದ ನಂ/ತಾಪಂಅ/ಗ್ರಾಪಂ/ ಇವರ 2016-17 ದಿನಾಂಕ: 17.12.2016 ರ ಪತ್ರದಲ್ಲಿ ನಿದೇಶ ನಿರ್ದೇಶಿಸಿದಂತೆ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರು ದಿನಾಂಕ: 06.01.2017ರ ಪ್ರಕಾರ ಸತ್ತಿ ಗ್ರಾಮ ಗಾಂವಾಠಾಣ ಜಾಗೆಯನ್ನು ಇವರು ದಿನಾಂಕ: 06.01.2017ರ ಪ್ರಕಾರ ಸತ್ತಿ ಗ್ರಾಮ ಗಾಂವಾಠಾಣ ಜಾಗೆಯನ್ನು ದಿನಾಂಕ: 09.09.2011ರ ಠರಾವು ರಜಿಸ್ಟರದಲ್ಲಿ ಠರಾವು ಮಾಡಿ ಅವರಿಗೆ ಕೃಷಿಯೇತರ ಚಟುವಟಿಕೆಗಾಗಿ ಉಪಯೋಗ ಮಾಡುವಂತೆ ಠರಾವು ಪಾಸು ಮಾಡಿದ್ದನ್ನು ತಾವೇ ಸ್ವಂತಃ ಒಪ್ಪಿಕೊಂಡಿರುತ್ತಾರೆ. ಹಾಗೂ ಸದರಿ ಗಾಂವಾಠಾಣ ಜಾಗೆಗೆ ಸಂಬಂಧ ಪಟ್ಟಂತೆ ಯಾವುದೇ ತರಹದಿಂದ ಹಣವನ್ನು ವಸೂಲಾತಿ ಮಾಡಿರುವುದಿಲ್ಲ ಒಂದು ವೇಳೆ ತಾವು ಆ ಜಾಗೆಗೆ ಸಂಬಂಧ ಪಟ್ಟಂತೆ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಿದ್ದಲ್ಲಿ ನಾನು ಗ್ರಾಮ ಪಂಚಾಯಿತಿಗೆ ಭರಣಾ ಮಾಡಲು ಸಿದ್ಧಳಿರುತ್ತೇನೆ ಅಂತ ಲಿಖಿತ ಹೇಳಿಕೆಯನ್ನು ಗ್ರಾಮ ಪಂಚಾಯತ ಅಧ್ಯಕ್ಷರು / ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತ ಸತ್ತಿ ಇವರಿಗೆ ಸಲ್ಲಿಸಿದ್ದಾರೆ (ಪ್ರತಿ ಲತ್ತಿಸಿದೆ ಪುಟ ಸಂಖ್ಯೆ-9) ಆದ್ದರಿಂದ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರು ದಿನಾಂಕ: 09.09.2011ರ ನಡುವಳಿಕೆಯನ್ನು ತಾವೇ ಸ್ವಂತಃ ಒಪ್ಪಕೊಂಡಿದ್ದು ನನ್ನ ಅನಧಿಕೃತ ಗೈರು ಹಾಜರಿಯಲ್ಲಿ ಅಧ್ಯಕ್ಷರು ಶ್ರೀಮತಿ ಮಾಸಾಬಿ ಜಮಾಲಬಾಯಿ ಇವರು ಶ್ರೀ ಈರಪ್ಪ ಗಂಗಪ್ಪ ತಮದಡ್ಡಿ ಹಾಗೂ ಶ್ರೀ ಆರ್ ಆಯ್ ಪೋಲಿಸನವರ ಪ್ರಭಾರ ಪಂಚಾಯತ ಅಭಿವೃದ್ಧಿ

ಅಧಿಕಾರಿಗಳು ಸದರಿ ಗ್ರಾಮ ಪಂಚಾಯತ ಗುಮಾಸ್ತರನ್ನು ಇವರನ್ನು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಸದರಿ ಗ್ರಾಮ ಠಾಣಾ ಜಾಗೆಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ಸೃಷ್ಠಿಸಿ ಶ್ರೀ ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರ ಹೆಸರನ್ನು ಆಸ್ತಿ ರಜಿಸ್ಟರಿನಲ್ಲಿ ದಾಖಲಿಸಿ ಉತಾರೆಯನ್ನು ನೀಡಿರುತ್ತಾರೆ ಹೀಗೆ ತಮ್ಮ ತಪ್ಪೊಪ್ಪಿಗೆಯನ್ನು ಸ್ವಂತಃ ಒಪ್ಪಿಕೊಂಡು ಸದರಿ ಗ್ರಾಮ ಠಾಣಾ ಜಾಗೆಯ ಈಗಿನ ಮಾರುಕಟ್ಟೆ ಅಥವಾ ಉಪನೊಂದಣಾಧಿಕಾರಿಗಳ ಅಥಣಿ (ಸಬ್ ರಜಿಸ್ಟರ್) ಇವರ ನಿಗದಿ ಪಡಿಸದ ಮೌಲ್ಯವನ್ನು ನಾನು ಗ್ರಾಮ ಪಂಚಾಯತಿಗೆ ಹಣವನ್ನು ಭರಿಸಲು ಸಿದ್ಧಳಿರುತ್ತೇನೆಂದು ದಿನಾಂಕ: 6.1.2017ರ ಪತ್ರದಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಕೊಟ್ಟಿರುತ್ತರೆ.

9) ಖಂಡಿಕೆ 8 ರಲ್ಲಿ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರ ನೀಡಿರುವ ಹೇಳಿಕೆಯ ಪ್ರಕಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಅಥಣಿ ಇವರ ಪತ್ರದ ನಂ:ತಾಪಂಅ/ಗ್ರಾಪಂ/ವಿವ–2017–18/212 ದಿನಾಂಕ: 12.06.2017ರ ಪತ್ರದಲ್ಲಿ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಇವರಿಂದ 76000/– (ಎಪ್ಪತ್ತಾರು ಸಾವಿರ) ರೂ ಗಳನ್ನು ಭರಣ ಮಾಡಬೇಕೆಂತ ತಿಳಿಸಿದ ಪ್ರಯುಕ್ತ ಸದರಿಯವರು ಗ್ರಾಮ ಪಂಚಾಯತ ಸಾಮಾನ್ಯ ಪಾವತಿ ನಂ 66 ದಿನಾಂಕ: 27.06.2017 ರಂದು 76000/– ರೂಗಳನ್ನು ಭರಣಾ ಮಾಡಿದ್ದಾರೆ. ಗ್ರಾಮ ಪಂಚಾಯತ ನಿಧಿಗೆ ಜಮಾ ಮಾಡಿದ್ದಾರೆ. ಗ್ರಾಮ ಪಂಚಾಯತ ಖಾತೆಗೆ ತಮ್ಮ ಖಾತೆಯಿಂದ 27.06.2017ಕ್ಕೆ ಜಮಾ ಆಗಿದೆ.

10) ಖಂಡಿಕೆ 9ರ ಪ್ರಕಾರ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಅಧ್ಯಕ್ಷರು ತಮ್ಮ ತಪ್ಪೊಪ್ಪಿಗೆಯನ್ನು ಒಪ್ಪಿಕೊಂಡು ಪ್ರಕಾರ ಗ್ರಾಮ ಪಂಚಾಯತ ನಿಧಿಗೆ 76000/– ರೂ. ಗಳನ್ನು ತಮ್ಮ ಸ್ವಂತ ಖಾತೆಯಿಂದ ಗ್ರಾಮ ಪಂಚಾಯತ ನಿಧಿಗೆ ಜಮಾ ಮಾಡಿರುತ್ತಾರೆ. ಇದನ್ನು ಅವಲೋಕಿಸಿದಾಗ ಈ ಪ್ರಕರಣಗಳಿಗೆ 1) ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಅಧ್ಯಕ್ಷರು 2) ಶ್ರೀ. ಈರಪ್ಪ ಗಂಗಪ್ಪ ತಮದಡ್ಡಿ ಗುಮಾಸ್ತರು 3) ಶ್ರೀ. ಆರ್ ಆಯ್ ಪೋಲಿಸನವರು ಪ್ರಭಾರ ಅಭಿವೃದ್ಧಿ ಅಧಿಕಾರಿಗಳು. ಮೇಲ್ನೋಟಕ್ಕೆ ಇವರೆಲ್ಲರೂ ಸಂಪೂರ್ಣ ಜವಾಬ್ದಾರರಾಗಿರುತ್ತಾರಂತೆ ಕಂಡು ಬರುತ್ತದೆ. ಇದರಲ್ಲಿ ನನ್ನ ಪಾತ್ರ ಏನೂ ಇರುವುದಿಲ್ಲ. (ಪ್ರತಿ ಲತ್ತಿಸಿದೆ ಪುಟ ಸಂಖ್ಯೆ–11)

11) ಅಪರ ನಿರ್ಬಂದಕರು ವಿಚಾರಣೆಗಳು–8 ಕರ್ನಾಟಕ ಲೋಕಾಯುಕ್ತ ಬೆಂಗಳೂರು ಸಂಖ್ಯೆ ಉಪಲೋಕ–1/ಡಿಇ–549/2016/ಎಆರ್‌ಇ–8 ದಿನಾಂಕ: 07.03.2012 ರಲ್ಲಿ ದೋಷಾರೋಪಣೆ ಪಟ್ಟಿಯಲ್ಲಿ ತಿಳಿಸಿದಂತೆ ಎಲ್ಲಾ ಅವಶ್ಯಕ ದಾಖಲೆಗಳೊಂದಿಗೆ ದಿನಾಂಕ: 27.04.2017 ರಂದು ಮಾನ್ಯ ಸಿ.ಜಿ.ಕಲಮಠ ನ್ಯಾಯವಾದಿಗಳು ಬೆಳಗಾವಿ ಇವರ ಮುಖಾಂತರ ವಕಾಲತ್ತು ಅರ್ಜಿಯನ್ನು ಸಲ್ಲಿಸಿದೆ. (ಪ್ರತಿ ಲತ್ತಿಸಿದೆ ಪುಟ ಸಂಖ್ಯೆ–12)

ಉಪಲೋಕಾಯುಕ್ತ–1 ಕರ್ನಾಟಕ ಬೆಂಗಳೂರು ಇವರ ಶಿಫಾರಸ್ಸು (Recommendation)NO. UPLOK-1/DE-549/2016/ARE-8 ದಿನಾಂಕ: 28.03.2018 ರ ಶಿಫಾರಸ್ಸಿನ ಪ್ರತಿಯನ್ನು ಸಂಪೂರ್ಣವಾಗಿ ನಾನು ಓದಿದ್ದೇನೆ ಮತ್ತು ಅವಲೋಕಿಸಿದ್ದೇನೆ 1 ರಿಂದ 6 ರವರೆಗಿನ ಎಲ್ಲಾ ಅಂಶಗಳನ್ನು ಓದಿದ್ದೇನೆ ಹಾಗೂ ವಿಚಾರಣಾಧಿಕಾರಿಗಳು ವಿಚಾರಣಯ ಎಲ್ಲಾ ಅಂಶಗಳನ್ನು ಓದಿದ್ದೇನೆ ಅದರಂತೆ ಮಾನ್ಯ ಉಪಲೋಕಾಯುಕ್ತರು ವಿಚಾರಣಾಧಿಕಾರಿಗಳು ಶಿಫಾರಸ್ಸಿನ ಮೇರೆ ಅನುಕ್ರಮ ನಂ–7 ರಲ್ಲಿ ಮಾನ್ಯ ಉಪಲೋಕಾಯುಕ್ತರು ಬೆಂಗಳೂರು ಇವರ 7 ರಲ್ಲಿ ನನ್ನ ಸಂಚಿತವಾಗಿ 4 ವೇತನ ಬಡ್ತಿಗಳನ್ನು (With cumulative effect) ಹಾಗೂ ನಾಲ್ಕು ವರ್ಷಗಳವರೆಗೂ ಪದನೂತ್ತಿಯನ್ನು ತಡೆಯಲು ಶಿಫಾರಸ್ಸು ಪತ್ರವನ್ನು ತಮ್ಮ ಕಾರಣ ಕೇಳುವ ನೋಟಿಸಗೆ ಲಗತ್ತಿಸಿಲಾಗಿದೆ ಆದರೆ ನಾನು ಸದರಿ ಕಾರಣ ಕೇಳುವ ನೋಟಿಸಿಗೆ ಅನುಕ್ರಮನಂ 1 ರಿಂದ 12 ರವರೆಗೆ ಎಲ್ಲಾ ಸಾಧ್ಯವಾದಷ್ಟು ಮಟ್ಟಿಗೆ ತಮ್ಮಗೆ ಮನವರಿಕೆ ಮಾಡಿಕೊಂಡಿದ್ದೇನೆ ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಅನುಕ್ರಮನಂಬರ 1 ರಿಂದ 12 ರವರೆಗಿನ ಎಲ್ಲಾ ಖಂಡಿಕೆಗಳಿಗೆ ಎಲ್ಲಾ ಅವಶ್ಯಕ ಸಾಕ್ಷಾಧಾರವನ್ನು (ದಾಖಲೆಗಳನ್ನು) ರುಜುವಾತ ಪಡಿಸಿದ್ದೇನೆ. ಶ್ರೀ. ಶಿವಾಜಿಬಾಳಪ್ಪ ಸನದಿ ಪತ್ರಕರ್ತ ಸಾ॥ ಅಥಣಿ ದಿನಾಂಕ: 03.06.2014 ರಲ್ಲಿ ಸತ್ತಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಸತ್ತಿ ಗ್ರಾಮದ ಗ್ರಾಮ ಠಾಣಾ ಜಾಗೆಯನ್ನು ಶ್ರೀ. ಬಾಹುಸಾಹೇಬ ಕೃಷ್ಣಾಜಿ ಕುಲಕರ್ಣಿ ಇವರಿಗೆ ದಿನಾಂಕ: 09.09.2011 ಸಾಮಾನ್ಯ ಸಭೆಯಲ್ಲಿ ನಡುವಳಿಕೆಯನ್ನು ಮಾಡಿ ಸತ್ತಿ ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಅಧ್ಯಕ್ಷರು ಇವರು ಒಪ್ಪಕೊಂಡ ಪ್ರಕಾರ ಅವರು ಸತ್ತಿ ಗ್ರಾಮ ಪಂಚಾಯತಿ ನಿಧಿಗೆ (RTGS) ಮೂಲಕ ತಮ್ಮ ಖಾತೆಯಿಂದ ಸತ್ತಿ ಗ್ರಾಮ ಪಂಚಾಯತ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಅಧ್ಯಕ್ಷರು ಶ್ರೀಮತಿ ಮಾಸಾಬಿ ಜಮಾಲ ಜಮಾಲಬಾಯಿ ಯವರು ಪಂಚಾಯತ ಗುಮಾಸ್ತ ಶ್ರೀ ಈರಪ್ಪ ಗಂಗಪ್ಪ ತಮದಡ್ಡಿ ಹಾಗೂ

ಶ್ರೀ. ಆರ್.ಆಯ್. ಪೋಲಿಸನವರ ಪ್ರಭಾರ ಪಿಡಿಓ ಇವರನ್ನು ಶಾಮೀಲನ್ನು ಮಾಡಿಕೊಂಡು ಈ ಘಟನೆಗಳನ್ನು ಮಾಡಿರುತ್ತಾರೆ. ಆದ್ದರಿಂದ ಈ ಮೂವರು ತಪ್ಪಿಸ್ಥತರೆಂದು ಈ ಮೇಲಿನ ಎಲ್ಲಾ ಅಂಶಗಳಿಂದ ತಪ್ಪಿಸ್ಥರೆಂದು ತಿಳಿದು ಬರುತ್ತದೆ. ಆದರೆ ಈ ಎಲ್ಲಾ ಪ್ರಕರಣಗಳಿಗೆ ನಾನು ಯಾವುದೇ ತರಹದಿಂದ ನಾನು ಜವಬ್ದಾರನಾಗಿರುವುದಿಲ್ಲ ಆದ್ದರಿಂದ ಉಪಲೋಕಾಯುಕ್ತರು ಬೆಂಗಳೂರು ಇವರು ನನ್ನ ನಾಲ್ಕು ಸಂಚಿತವಾಗಿ ವೇತನ ಬಡ್ತಿಗಳನ್ನು ಹಾಗೂ ಪದನೋತ್ತಿಯನ್ನು ತಡೆಹಿಡಿಯಲು ಮಾಡಿದ ಶಿಫಾರಸ್ಸಗಳನ್ನು ಅನುಕ್ರಮ ನಂಬರ 7ನ್ನು ನಾನು ಒಪ್ಪಿಕೊಳುವುದಿಲ್ಲ ಹಾಗೂ ನಾನು ಸಂಪೂರ್ಣವಾಗಿ ಅವರ ಶಿಫಾರಸ್ಸನ್ನು ನಾನು ತಳ್ಳಿ ಹಾಕಿರುತ್ತೇನೆ ಆದರಿಂದ ಘೇ॥ ರವರು ನನ್ನ ಮೇಲೆ ಮಾಡಿದ ದೋಷಾರೋಪಣೆ ಪಟ್ಟಿ ಹಾಗೂ ನಾಲ್ಕು ಸಂಚಿತವಾಗಿ ತಡೆ ಹಿಡಿಯಲು ಮಾಡಿದ ಶಿಫಾರಸ್ಸು ಹಾಗೂ 4 ವರ್ಷ ಪದನೊತ್ತಿ ಇವುಗಳನ್ನು ಕೈ ಬಿಟ್ಟು ನನಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ಸಂಬಂಧಪಟ್ಟ ದಾಖಲೆಗಳೊಂದಿಗೆ ಕೋರಿರುತ್ತಾರೆ.

ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಛರಿಸಿದೆ:-

"26. In the cross examination, DW-1 has admitted that it is the responsibility of the DGO to write the proceedings and resolution. But, he states that the proceedings are got written through the clerk. However, as per rules it is the responsibility of the PDO to see that the proceedings are written properly. DW-1 has further stated in his cross that usually the proceedings will not be written on the same day but will be written leisurely after scrutinizing the applications and inspecting the spot. This explanation is not at all acceptable. Ex.D-1 is the copy of the entire proceedings of 09.09.2011. The same is signed by the DGO as PDO., at the end of the proceedings after serial no.22. The ink of proceedings no.22 may have been written in a different ink or handwriting but that will not be of any consequence. The signature found in Ex.D-1 and the signature of the DGO found in his first Oral Statement and other documents tallies with each other. DGO had given a police complaint as per Ex.D-6 alleging that his sign has been forged. But, it was given after commencement of this Enquiry. Ex.D-7 is an endorsement given by police. DGO made a vague attempt to deny his signature in Ex.D-1 but is un-successful. His contention is not believable.

27. Ex.D-2, Ex.D-3, Ex.D-4, Ex.D-5 are documents pertaining to issuance of notice to the Grama Panchayath President and deposit of Rs.76,000/- by her. The reimbursement of alleged loss of Rs.76,000/- by the Grama Panchayath President is immaterial and has no nexus to the charge alleged against the DGO.

Disciplinary Authority has proved the charges leveled against the DGO."

ಸರ್ಕಾರವು ಪರಿಶೀಲಿಸಿ, ಆರೋಪದ ತೀವ್ರತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಪಡೆಯುವ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ಮುಂದೂಡುವ' ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ

ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಪಡೆಯುವ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ಮುಂದೂಡುವ' ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 550 ಗ್ರಾಪಂಕಾ 2016(ಭಾಗ-1), ಬೆಂಗಳೂರು, ದಿನಾಂಕ: 04.07.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಪಡೆಯುವ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ಮುಂದೂಡುವ' (penalty of withholding four annual increments payable to DGO Sri M.P.Karigoudar, Panchayat Development Officer, then working at Satti Grama Panchayat, Athani Taluk, Belagavi District with cumulative effect and also deferring the promotion of DGO Sri M.P.Karigoudar, by four years, whenever he becomes due for promotion) ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ ಜಿಲ್ಲಾ ಪಂಚಾಯತಿ, ಬಾಗಲಕೋಟೆ.
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
7) ಕಾರ್ಯನಿರ್ವಾಹಕ ಅಧಿಕಾರಿ, ಅಥಣಿ ತಾಲ್ಲೂಕು ಪಂಚಾಯತಿ, ಅಥಣಿ, ಬೆಳಗಾವಿ ಜಿಲ್ಲೆ.
8) ಕಾರ್ಯನಿರ್ವಾಹಕ ಅಧಿಕಾರಿ, ಮುಧೋಳ ತಾಲ್ಲೂಕು ಪಂಚಾಯತಿ, ಮುಧೋಳ, ಬಾಗಕೋಟೆ ಜಿಲ್ಲೆ.
   (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
9) ಶ್ರೀ ಎಂ.ಪಿ.ಕರಿಗೌಡರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಲಗಲಿ ಗ್ರಾಮ ಪಂಚಾಯತಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
   (ಅಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸತ್ತಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ)
10) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.